ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/04/ಎಯುಡಿ/2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:19.01.2013

## ಸುತ್ತೋಲೆ

ವಿಷಯ : ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಗಳನ್ನು ನಿಗಧಿತ ಕಾಲಮಿತಿಯಲ್ಲಿ ಸಲ್ಲಿಸುವ ಕುರಿತು

*****

ಜಿಲ್ಲಾ ಪಂಚಾಯತ್ ವಾರ್ಷಿಕ ಲೆಕ್ಕಗಳನ್ನು 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಸೆಕ್ಷನ್ 259(3) ಮತ್ತು ಜಿಲ್ಲಾ ಪಂಚಾಯತ್ (ಹಣಕಾಸು ಮತ್ತು ಲೆಕ್ಕಪತ್ರ) ನಿಯಮಗಳು 1996ರ ನಿಯಮ 38(5)ರ ಅನ್ವಯ ಜಿಲ್ಲಾ ಪಂಚಾಯತ್‌ಗಳು ಆರ್ಥಿಕ ವರ್ಷ ಮುಕ್ತಾಯಗೊಂಡು 3 ತಿಂಗಳೊಳಗಾಗಿ ಸಾಮಾನ್ಯ ಸಭೆಯ ಅನುಮೋದನೆಯೊಂದಿಗೆ ಮಹಾಲೇಖಪಾಲರಿಗೆ ಹಾಗೂ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಕಲಂ 250(3) ಹಾಗೂ ಕರ್ನಾಟಕ ಪಂಚಾಯತ್‌ಗಳ (ಹಣಕಾಸು & ಲೆಕ್ಕಗಳು) ನಿಯಮಗಳು, 1996 ರ ನಿಯಮ 31(5) ರಂತೆ ತಾಲ್ಲೂಕು ಪಂಚಾಯತ್‌ಗಳು ಕೂಡ ಸಲ್ಲಿಸಬೇಕಾಗಿರುತ್ತದೆ.

ಆದರೆ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಗಳಲ್ಲಿ ವಾರ್ಷಿಕ ಲೆಕ್ಕಗಳನ್ನು ಸಿದ್ಧಪಡಿಸುವಲ್ಲಿ ಅತೀವ ವಿಳಂಬ ಮಾಡುತ್ತಿರುವ ಬಗ್ಗೆ ಮಹಾಲೇಖಪಾಲರು ಗಂಭೀರವಾದ ಆಕ್ಷೇಪಣೆ ಮಾಡಿದ್ದು, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಗಳು ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಲು ವಿಳಂಬ ಮಾಡುತ್ತಿರುವುದರಿಂದಾಗಿ ಸಕಾಲದಲ್ಲಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಅಂಶವನ್ನು ಮಹಾಲೇಖಪಾಲರು ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಅಲ್ಲದೆ ಈ ಕುರಿತು ವಿಧಾನಮಂಡಲದ ಕಾಗದಪತ್ರಗಳ ಸಮಿತಿ ಸಭೆಯಲ್ಲಿ ಗಂಭೀರವಾಗಿ ಪರಿಗಣಿಸಿ ಈ ಪ್ರಕ್ರಿಯೆ ಕುರಿತು ಕಾಲಮಿತಿ ನಿಗಧಿಪಡಿಸಲು ದಿನಾಂಕ:11.01.2013 ರಂದು ನಡೆದ ಸಮಿತಿ ಸಭೆಯಲ್ಲಿ ತಿಳಿಸಲಾಗಿದೆ.

ಆದ್ದರಿಂದ ಜಿಲ್ಲಾ ಪಂಚಾಯತ್‌ಗಳು 2010-11ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಸಿದ್ಧಪಡಿಸಿ ಸಲ್ಲಿಸಲು ಈ ಕೆಳಕಂಡ ಕಾಲಮಿತಿಗಳನ್ನು ನಿಗಧಿಪಡಿಸಲಾಗಿದೆ.

| | | |
|---|---|---|
| ಏಪ್ರಿಲ್ | 1. | ಮಾರ್ಚ್ ಮಾಹೆಯ ಲೆಕ್ಕ ಸಂಕಲನ ಕಾರ್ಯ ಮುಗಿಸತಕ್ಕದ್ದು |
| | 2. | ಕಳೆದ ಆರ್ಥಿಕ ವರ್ಷದಲ್ಲಿನ ಕೇಂದ್ರ ಪುರಸ್ಕೃತ ಯೋಜನೆಗಳ ಲೆಕ್ಕಪರಿಶೋಧನೆ ಕೈಗೊಳ್ಳುವಂತೆ ಚಾರ್ಟೆಡ್ ಅಕೌಂಟೆಂಟ್‌ರಿಗೆ ಆದೇಶ ನೀಡತಕ್ಕದ್ದು ಮತ್ತು ಸಂಬಂಧಪಟ್ಟ ಯೋಜನೆಗಳ ಲೆಕ್ಕಪತ್ರ ದಾಖಲೆಗಳನ್ನು ಒದಗಿಸುವ ಏರ್ಪಾಡು ಮಾಡತಕ್ಕದ್ದು. |
| ಮೇ | 3. | ವಾರ್ಷಿಕ (ಖಜಾನೆ) ಲೆಕ್ಕಪತ್ರಗಳ ಸಂಕಲನ ಕಾರ್ಯ ಮುಗಿಸತಕ್ಕದ್ದು |
| | 4. | ಚಾರ್ಟೆಡ್ ಅಕೌಂಟೆಂಟ್ ರವರು ಕೈಗೊಂಡ ಯೋಜನೆಗಳ ಲೆಕ್ಕಪರಿಶೋಧನಾ ಕಾರ್ಯ ಪೂರ್ಣಗೊಳ್ಳತಕ್ಕದ್ದು. |
| ಜೂನ್ | 5. | ಚಾರ್ಟೆಡ್ ಅಕೌಂಟೆಂಟ್ ರವರು ನೀಡಿದ ಲೆಕ್ಕಪರಿಶೋಧನಾ ವರದಿಗಳನ್ನು ಆಧರಿಸಿ ಯೋಜನೆಗಳ ಆರಂಭ ಶಿಲ್ಕು/ಅಂತಿಮ ಶಿಲ್ಕಿನ ಮೊತ್ತಗಳನ್ನು ಜೂನ್ 10 ರೊಳಗೆ ವಾರ್ಷಿಕ ಲೆಕ್ಕಗಳಲ್ಲಿ ಅಳವಡಿಸತಕ್ಕದ್ದು. |
| | 6. | ಜೂನ್ 15 ನೇ ತಾರೀಖಿನೊಳಗೆ ಹಣಕಾಸು ಸ್ಥಾಯಿ ಸಮಿತಿಯಲ್ಲಿ ವಾರ್ಷಿಕ ಲೆಕ್ಕಗಳನ್ನು ಮಂಡಿಸತಕ್ಕದ್ದು. ಅವಶ್ಯವಾದಲ್ಲಿ ವಿಶೇಷ ಸಭೆ ಕರೆಯಲು ಕ್ರಮವಹಿಸುವುದು. |
| | 7. | ಜೂನ್20 ರೊಳಗೆ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ಮುಂದೆ ವಾರ್ಷಿಕ ಲೆಕ್ಕಗಳನ್ನು ಮಂಡಿಸತಕ್ಕದ್ದು. ಅವಶ್ಯವಾದಲ್ಲಿ ವಿಶೇಷ ಸಭೆ ಕರೆಯಲು ಕ್ರಮವಹಿಸುವುದು. |
| | 8. | ಜೂನ್ 30 ರೊಳಗೆ ಅನುಮೋದಿತ ವಾರ್ಷಿಕ ಲೆಕ್ಕಗಳನ್ನು ಸರ್ಕಾರಕ್ಕೆ ಮತ್ತು ಮಹಾಲೇಖಪಾಲರಿಗೆ ಸಲ್ಲಿಸಬೇಕು. |

ಪ್ರಸ್ತುತ ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ ಅಕೌಂಟಿಂಗ್ ಸಾಫ್ಟ್‌ವೇರ್ ಅಳವಡಿಸಲಾಗಿದ್ದು, ಮಾಸಿಕ ಲೆಕ್ಕಗಳನ್ನು ಸದರಿ ತಂತ್ರಾಂಶದಿಂದಲೇ ತಯಾರಿಸಲಾಗುತ್ತಿರುವುದರಿಂದ ವಾರ್ಷಿಕ ಲೆಕ್ಕಗಳನ್ನು ಮೇಲೆ ನಿಗಧಿಪಡಿಸಿದ ಕಾಲಮಿತಿಯಲ್ಲಿ ವಿಳಂಬವಿಲ್ಲದೇ ಸಿದ್ಧಪಡಿಸಬಹುದಾಗಿದೆ. ಬಹಳಷ್ಟು ಜಿಲ್ಲಾ ಪಂಚಾಯತಿಗಳು ಚಾರ್ಟೆಡ್ ಅಕೌಂಟೆಂಟ್ ರವರಿಂದ ಯೋಜನೆಗಳ ಲೆಕ್ಕಪರಿಶೋಧನೆ ಮಾಡಿಸದೆ ಅವರಿಂದ ದೃಢೀಕರಿಸಲ್ಪಟ್ಟ ಅಂತಿಮ ಶಿಲ್ಕುಗಳನ್ನು ವಾರ್ಷಿಕ ಲೆಕ್ಕಗಳಲ್ಲಿ ಅಳವಡಿಸಿಕೊಳ್ಳದೇ ಮತ್ತು ನಿಧಿವಾರು ಅಂತಿಮ ಶಿಲ್ಕುಗಳನ್ನು ನಮೂದಿಸದೇ ಕೇವಲ ಖಜಾನೆ ಲೆಕ್ಕಗಳ ಸಂಕಲನವನ್ನು ಮುಗಿಸಿ ಸರ್ಕಾರಕ್ಕೆ ಮತ್ತು ಮಹಾಲೇಖಪಾಲರಿಗೆ ಸಲ್ಲಿಸುವ ಪರಿಪಾಠವನ್ನು ಬೆಳೆಸಿಕೊಂಡಿವೆ. ಇದು ಸರಿಯಾದ ಕ್ರಮವಾಗಿರುವುದಿಲ್ಲ. ಚಾರ್ಟೆಡ್ ಅಕೌಂಟೆಂಟ್‌ರವರಿಂದ ದೃಢೀಕರಿಸಲ್ಪಟ್ಟ ಅಂತಿಮ ಶಿಲ್ಕುಗಳನ್ನು ವಾರ್ಷಿಕ ಲೆಕ್ಕಗಳಲ್ಲಿ ಅಳವಡಿಸಿಕೊಂಡ ನಂತರವೇ ಅನುಮೋದಿತ ವಾರ್ಷಿಕ ಲೆಕ್ಕಗಳನ್ನು ಸರ್ಕಾರಕ್ಕೆ ಮತ್ತು ಮಹಾಲೇಖಪಾಲರಿಗೆ ಸಲ್ಲಿಸತಕ್ಕದ್ದು. ಹಾಗೆಯೇ ವಾರ್ಷಿಕ ಲೆಕ್ಕಗಳನ್ನು ಸಿದ್ಧಪಡಿಸಿದ ತಕ್ಷಣ ಹಣಕಾಸು ಸ್ಥಾಯಿ ಸಮಿತಿ ಹಾಗೂ ಸಾಮಾನ್ಯ ಸಭೆಗಳನ್ನು ಸಕಾಲದಲ್ಲಿ ಕರೆಯಲು ಸಾಧ್ಯವಾಗದಿದ್ದಲ್ಲಿ ವಿಶೇಷ ಸಭೆಗಳನ್ನು ಕರೆದು ವಾರ್ಷಿಕ ಲೆಕ್ಕಗಳಿಗೆ ಅನುಮೋದನೆ ಪಡೆಯತಕ್ಕದ್ದು. ಆದ್ದರಿಂದ ನಿಗಧಿತ ಅವಧಿಯೊಳಗೆ ಅನುಮೋದಿತ ಪರಿಪೂರ್ಣ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸದಿರುವುದನ್ನು ಇನ್ನು ಮುಂದೆ ನಿಯಮ 30(4)(iv) ರ ಮೇರೆಗೆ ಮುಖ್ಯ ಲೆಕ್ಕಾಧಿಕಾರಿಗಳ ಕರ್ತವ್ಯಲೋಪ ಎಂದು ಪರಿಗಣಿಸಲಾಗುವುದು. ಅದೇ ರೀತಿ ಮೇಲ್ಕಂಡ ಅವಧಿಯಲ್ಲೇ MAS ನಮೂನೆಗಳಲ್ಲಿ ಲೆಕ್ಕಪತ್ರಗಳನ್ನು ತಯಾರಿಸಿ ಸಲ್ಲಿಸುವುದು.

<u>ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಗಳನ್ನು ಸಲ್ಲಿಸುವಿಕೆ.</u>

ಅಧಿನಿಯಮ ಸೆಕ್ಷನ್ 250(3) ರ ಮೇರೆಗೆ ಮೇಲ್ಕಂಡ ಕಾಲಮಿತಿಯನ್ನು ಆರ್ಥಿಕ ವರ್ಷ ಮುಕ್ತಾಯಗೊಂಡ ಸಾಲಿನ ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಗಳನ್ನು ಸಲ್ಲಿಸುವಲ್ಲಿಯೂ ಪಾಲಿಸತಕ್ಕದ್ದು. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಗಳನ್ನು ಜೂನ್ 30 ರೊಳಗೆ ಸಲ್ಲಿಸುವ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು ನಿಗಾವಹಿಸತಕ್ಕದ್ದು. ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಗಳನ್ನು ನಿಗಧಿತ ಕಾಲಮಿತಿಯಲ್ಲಿ ಸಿದ್ಧಪಡಿಸಿ ಸಲ್ಲಿಸುವಲ್ಲಿ ನಿರ್ಲಕ್ಷ್ಯ ತೋರುವ ಕಾರ್ಯನಿರ್ವಾಹಕ ಅಧಿಕಾರಿಗಳು/ಸಹಾಯಕ ಲೆಕ್ಕಾಧಿಕಾರಿಗಳ ಮೇಲೆ ಕರ್ತವ್ಯಲೋಪ ಎಂದು ಪರಿಗಣಿಸಿ ಶಿಸ್ತು ಕ್ರಮ ಜರುಗಿಸುವಂತೆ ಸೂಚಿಸಿದೆ.

(ವಿ. ರಶ್ಮಿ)
ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

<u>ಪ್ರತಿಯನ್ನು :-</u>

1. ಕಾರ್ಯದರ್ಶಿಗಳು, ವಿಧಾನಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು
2. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
3. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
4. ಎಲ್ಲಾ ನಿರ್ದೇಶಕರು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ
5. ಮಹಾಲೇಖಪಾಲರು (ಸ್ಥಳೀಯ ಸಂಸ್ಥೆಗಳು ಆಡಿಟ್) ಕರ್ನಾಟಕ, ಬೆಂಗಳೂರು
6. ಮೆ:ಸಿ.ಎಂ.ಸಿ. ಲೆಮಿಟೆಡ್, 11/2, ಪ್ಯಾಲೇಸ್ ರಸ್ತೆ, ಬೆಂಗಳೂರು
7. ನಿಯಂತ್ರಕರು (ಅಕೌಂಟ್ಸ್ ಮ್ಯಾನೇಜ್‌ಮೆಂಟ್) ಆರ್ಥಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು